ಭೇರ್ಮನ್ :— ಸರ್ಕಾರ ಒಪ್ಪಿಕೊಂಡಿರುವುದರಿಂದ ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಒಪ್ಪಿಸಲು ಅನುಮತಿ ನೀಡಲಾಗಿದೆ.

ಶ್ರೀ ಸಿ. ಬೈರೇಗೌಡ :— ನಾನು ವೈಯಕ್ತಿಕವಾಗಿ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಭೇರ್ಮನ್‌ರವರು ಬಹಳ ವಿಚಾರ ಮಾಡಿ ಹೇಳಿದ್ದಕ್ಕೆ ಸಂತೋಷ.

(ಕ) ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಚುನಾವಣೆ.

ಭೇರ್ಮನ್ :— ಸನ್ಮಾನ್ಯ ಯಾವಗಲ್‌ರವರು ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೋಸ್ಕರ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಇವತ್ತು ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲ ಮತ್ತು ತಾವು ಪತ್ರವನ್ನು ಇವತ್ತು ಬೆಳಿಗ್ಗೆ ಕೊಟ್ಟಿರುವುದರಿಂದ ನಾಳೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಆರ್. ಯಾವಗಲ್ :— ಇದು ಬಹಳ ಪ್ರಮುಖವಾದ ವಿಚಾರ. ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಚುನಾವಣೆಗೆ ನಾಮಪತ್ರ ಸಲ್ಲಿಸಲು ನಾಳೆ ಕೊನೆ ದಿವಸವಾಗಿರುವುದರಿಂದ ಈ ವಿಷಯ ಸರ್ಕಾರದ ಗಮನಕ್ಕೆ ತರಬೇಕು.

ಭೇರ್ಮನ್ :— ಈಗ ಉತ್ತರ ಕೊಡುವುದಕ್ಕೆ ಮಂತ್ರಿಗಳಿಲ್ಲ.

ಶ್ರೀ ಬಿ.ಆರ್. ಯಾವಗಲ್ :— ನನಗೆ ಉತ್ತರ ಬೇಕು. ಹಾಗೆಯೇ ಇದನ್ನು ಸಭೆಯ ಗಮನಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು.

ಭೇರ್ಮನ್ :— ಮಾನ್ಯ ಮಂತ್ರಿಗಳನ್ನು ಸಭೆಗೆ ಕರೆಸಿಕೊಂಡು ಉತ್ತರ ಕೊಡಿಸೋಣ. ಆದುದರಿಂದ, ಇದನ್ನು ನಾಳೆ ಇಟ್ಟುಕೊಳ್ಳೋಣ.

ಶ್ರೀ ಬಿ.ಆರ್. ಯಾವಗಲ್ :— ನಾಳೆ ದಿವಸ ಇದನ್ನು ಇಟ್ಟುಕೊಂಡರೆ ಏನೂ ಪ್ರಯೋಜನ ಆಗುವುದಿಲ್ಲ. ಈಗಾಗಲೇ ಚುನಾವಣೆ ಪ್ರೋಸಸ್ ಚಾಲನೆಯಾಗಿದೆ ಮತ್ತು ನಾಮಪತ್ರ ಸಲ್ಲಿಸುವುದಕ್ಕೆ ಇವತ್ತು ಕೊನೆಯ ದಿವಸವಾಗಿರುವುದರಿಂದ ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ಏನು ಪರಿಹಾರ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಬೇಕು. ಇಲ್ಲದಿದ್ದರೆ ದೊಡ್ಡ ಅಪಾದನೆ ಸರ್ಕಾರದ ಮೇಲೆ ಬರುತ್ತದೆ. ಆದ್ದರಿಂದ ದಯವಿಟ್ಟು ಇವತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು.

ಭೇರ್ಮನ್ :— ಇದರ ಬಗ್ಗೆ ಉತ್ತರ ಕೊಡುವುದಕ್ಕೆ ಮಂತ್ರಿಗಳಿಲ್ಲ.

ಶ್ರೀ ಬಿ.ಆರ್. ಯಾವಗಲ್ :— ನನಗೆ ಉತ್ತರ ಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಅವರಿಗೆ ಇದನ್ನು ಸರಿ ಮಾಡುವುದಕ್ಕೆ ಸಾಧ್ಯವೆಂದು ಅನ್ನಿಸಿದರೆ ಸಾಕು.

ಛೇರ್ಮನ್ :— ಮಾನ್ಯ ಸದಸ್ಯರು ಚುನಾವಣೆ ನಡೆಯುವುದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜ್ :— ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ನಂತರ ಸರ್ಕಾರ ಉತ್ತರ ಕೊಡಲಿ.

ಛೇರ್ಮನ್ :— ಇದು ಸಹಕಾರ ಮಂತ್ರಿಗಳಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಅವರೇ ಬಂದು ಉತ್ತರ ಕೊಡಬೇಕು. ಆದರೆ ಮಾನ್ಯ ಸದಸ್ಯರು ಉತ್ತರ ಬೇಡವೆಂದು ಹೇಳುತ್ತಿದ್ದಾರೆ.

+ ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಚುನಾವಣೆಗೆ ನೆನ್ನೆ ದಿವಸ ನೋಟಿಸ್ ಕೊಡಬೇಕಾಗಿತ್ತು. ಇವತ್ತು ನಾಮಪತ್ರ ಕೊಡುವುದಕ್ಕೆ ಕೊನೆಯ ದಿನ. ಬೆಳಿಗ್ಗೆಯಿಂದ ನಾಮಪತ್ರ ಸಲ್ಲಿಸುವುದಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಕಾದರೂ ನಾಮಪತ್ರ ತೆಗೆದುಕೊಂಡಿಲ್ಲ. ಈ ವ್ಯವಸ್ಥೆ ಹೇಗಿದೆ ಎಂದರೆ, ಅಲ್ಲಿ ರಿಟರ್ನಿಂಗ್ ಆಫೀಸರ್ ಆಗಿ ಒಬ್ಬ ಎ.ಸಿ.ಯವರನ್ನು ನೇಮಿಸಿದ್ದಾರೆ. ಇವರು ತಮ್ಮ ಅಧಿಕಾರವನ್ನು ಅಲ್ಲಿರುವ ಬ್ಯಾಂಕಿನ ಅಧಿಕಾರಿಗೆ, ಅಸಿಸ್ಟಂಟ್ ರಿಟರ್ನಿಂಗ್ ಆಫೀಸರ್ ಎಂದು ಡೆಲಿಗೇಟ್ ಮಾಡಿರುತ್ತಾರೆ. ಬೆಳಿಗ್ಗೆ ನಾಮಪತ್ರ ಸಲ್ಲಿಸಲಿಕ್ಕೆ ಅಧಿಕಾರಿಗಳ ಹತ್ತಿರ ಹೋದಾಗ ಅಲ್ಲಿದ್ದ ಅಧಿಕಾರಿಗಳು ಏನೇನೋ ಕಾರಣಗಳನ್ನು ನೀಡಿ ನಾಮಪತ್ರವನ್ನು ಪಡೆದುಕೊಳ್ಳದೆ, ಕೊನೆಗೆ ಹಿಂಬಾಗಿಲಿನಿಂದ ಓಡಿ ಹೋಗತಕ್ಕಂಥ ಪರಿಸ್ಥಿತಿ ಉಂಟಾಗಿದೆ. ನಂತರ ರಿಟರ್ನಿಂಗ್ ಆಫೀಸರ್ ಆಗಿರುವಂತಹ ಎ.ಸಿ.ಯವರಿಗೆ ಭೇಟಿ ಮಾಡಿದಾಗ ಇದರ ಬಗ್ಗೆ ವಿಚಾರಣೆ ಮಾಡುತ್ತೇವೆಂದು ಹೇಳಿದರು. ಎ.ಸಿಯವರು ನೀಡಿರತಕ್ಕಂಥ ಪತ್ರ ನನ್ನ ಹತ್ತಿರ ಇದೆ. ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನೋಟೀಸನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಇದಕ್ಕೆ ಉತ್ತರ ಕೊಡುವುದಕ್ಕೆ ಮಂತ್ರಿಗಳಿಗೆ ತಿಳಿಸಿಲ್ಲ ಆದ್ದರಿಂದ ಇದನ್ನು ನಾಳೆ ಇಟ್ಟುಕೊಳ್ಳೋಣವೆಂದು ತಾವು ಹೇಳುತ್ತೀರಿ. ಆದರೆ ಇದನ್ನು ನಾಳೆ ಮಾಡಿದರೆ ಏನೂ ಪ್ರಯೋಜನ ಆಗುವುದಿಲ್ಲ. ಇಲ್ಲಿ ಸ್ವತಃ ಸರ್ಕಾರಿ ಅಧಿಕಾರಿಗಳೇ ರಿಟರ್ನಿಂಗ್ ಆಫೀಸರ್ ಆಗಿ ಒಬ್ಬರ ನಾಮಪತ್ರ ಸಲ್ಲಿಸಿದ್ದಕ್ಕೆ ಸ್ವೀಕೃತಿ ಪತ್ರ ಕೊಡಲು ಆಗದೇ ಇರತಕ್ಕಂಥ ವ್ಯವಸ್ಥೆಯಾಗಿದೆ. ಇಲ್ಲಿ ಅಧಿಕಾರದ ದುರುಪಯೋಗ ಮತ್ತು ಕಾನೂನು ವಿರೋಧ ಚಟುವಟಿಕೆ ಆದರೆ ನಾವು ಯಾರ ಹತ್ತಿರ ಹೋಗಬೇಕೆಂದು ತಾವು ಗಂಭೀರವಾಗಿ ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಧಾರವಾಡ

ಜಿಲ್ಲೆಯಲ್ಲಿ ನಡೆದಿರುವ ವಿಷಯವನ್ನು ಹೇಳುತ್ತಿದ್ದೇನೆ. ಇದು ಸ್ವತಃ ಸಹಕಾರ ಮಂತ್ರಿಗಳ ಜಿಲ್ಲೆಯಾಗಿದೆ. ಈ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನ ಸಹಕಾರ ಇಲಾಖೆಯ ಸಚಿವರೇ ಆಗಿದ್ದಾರೆ. ಅಲ್ಲಿ ನಾಮಪತ್ರವನ್ನು ಪಡೆದುಕೊಳ್ಳಲು ನಿರಾಕರಿಸಿದ ವ್ಯಕ್ತಿ ಯಾರೆಂದರೆ, ಪ್ರಧಾನ ವ್ಯವಸ್ಥಾಪಕರು. ಇಲ್ಲಿ ಬೇರೆ ಯಾವುದೇ ಸೊಸೈಟಿಯಲ್ಲಿಯೂ ಕೂಡ ಈ ರೀತಿಯ ಪರಿಸ್ಥಿತಿ ಇಲ್ಲ. ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ನಲ್ಲಿ ಕೊಡಲ್ಲಿಕ್ಕೆ ಸಾಧ್ಯವಿಲ್ಲ ಎಂದು ತಪ್ಪಿಸಿಕೊಂಡು ಹೋಗುತ್ತಾರೆಂದರೆ, ಅಲ್ಲಿನ ವ್ಯವಸ್ಥೆ ಯಾವರೀತಿ ನಡೆಯುತ್ತಿದೆ ಎಂಬುದನ್ನು ತಾವೇ ಊಹೆ ಮಾಡಿ. ಅಲ್ಲಿ ಏನಾಗಿದೆ ಎಂಬುದರ ಬಗ್ಗೆ ತಾವು ದಯವಿಟ್ಟು ಗಮನಹರಿಸಬೇಕು. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೂಡಲೇ ಸ್ವೀಕೃತಿ ಪತ್ರವನ್ನು ಕೊಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಆದೇಶ ನೀಡಬೇಕು. ಒಂದು ವೇಳೆ ನಿರಾಕರಿಸಿದರೆ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಇದು ಕಾನೂನು ವ್ಯವಸ್ಥೆಗೆ ಒಂದು ಚಿಕ್ಕ ನಿದರ್ಶನವಾಗಿದೆ. ಇದರಿಂದ ಬೇರೆ ಪರಿಣಾಮ ಕೂಡ ಆಗುತ್ತದೆ ಮತ್ತು ಜನರು ಕಾನೂನನ್ನು ಕೈಗೆತ್ತಿಕೊಳ್ಳುವ ಪರಿಸ್ಥಿತಿ ಬರುತ್ತದೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದೆರಡು ಮಾತುಗಳನ್ನು ಹೇಳಿದರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ.

ಶ್ರೀ ಜೆ.ಹೆಚ್. ಪಟೀಲ್ (ಮುಖ್ಯಮಂತ್ರಿ) :— ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಗಮನಿಸಿದ್ದೇನೆ. ಸಂಬಂಧಪಟ್ಟ ಮಂತ್ರಿಗಳು ಬಂದ ತಕ್ಷಣ ಸಮಜಾಯಿಷಿ ಉತ್ತರವನ್ನು ಹೇಳುತ್ತಾರೆ.

(ಖ) ಕರ್ನಾಟಕ ಮಹಾರಾಷ್ಟ್ರ ಗಡಿವಿವಾದದ ಬಗ್ಗೆ ಮಹಾಜನ್ ವರದಿ ಜಾರಿಗೊಳಿಸಲು ಒತ್ತಾಯ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಛೇರ್ಮನ್‌ರವರೆ, ಮಾನ್ಯ ಪ್ರಧಾನ ಮಂತ್ರಿಗಳನ್ನು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಭೇಟಿ ಮಾಡಿ, ಗಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ಜೊತೆಗೆ 850 ಕನ್ನಡ ಪ್ರದೇಶದ ಹಳ್ಳಿಗಳನ್ನು ಮಹಾರಾಷ್ಟ್ರಕ್ಕೆ ಬಿಟ್ಟು ಕೊಡಬೇಕೆಂದು ಒತ್ತಾಯ ಮಾಡಿ ಮನವಿಯನ್ನು ಕೊಟ್ಟಿದ್ದಾರೆ. ಇದು ಸುಮಾರು 30 ವರ್ಷಗಳ ಹಳೆಯ ಇತಿಹಾಸ. ನಮ್ಮಲ್ಲಿ ಮಹಾಜನ್ ವರದಿ ಎನ್ನತಕ್ಕಂಥದ್ದು ಅಂತಿಮವಾಗಿದೆ. ಅದರೂ ಸಹ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ್ದಾರೆ ಹಾಗೂ ಎಲ್ಲಾ ವಿರೋಧಪಕ್ಷದ ಮುಖಂಡರನ್ನು ಸಹ ಭೇಟಿ ಮಾಡಿದ್ದಾರೆ. ಆದರೆ ಕರ್ನಾಟಕ ಸರ್ಕಾರ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡದೆ ಮೌನವಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಗಡಿ ಸಮಸ್ಯೆ ಬಗ್ಗೆ ಮಾನ್ಯ ಪ್ರಧಾನಮಂತ್ರಿಗಳನ್ನು ಭೇಟಿ ಕೂಡ ಮಾಡಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದೇನೆಂದರೆ, ಈ ಮಹಾಜನ್ ವರದಿಯನ್ನು